## ರಾಷ್ಟ್ರ ಧ್ವಜಾರೋಹಣ



ಇತ್ತೀಚೆಗೆ ಸ್ವಾತಂತ್ರ್ಯ ಹೋರಾಟಗಾರ ಷಡಕ್ಷರಪ್ಪ ಮಹಾರಾಜಪೇಟ ಮತ್ತು ಪಾರ್ವತಮ್ಮ ಮಹಾರಾಜಪೇಟ ಇವರ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಹಾವೇರಿಯ ಮೈಲಾರ ಮಹದೇವಪ್ಪನವರ ಸ್ಮಾರಕ ಭವನದ ಆವರಣದಲ್ಲಿ ಏಕ ಕಾಲಕ್ಕೆ ರಾಷ್ಟ್ರದ 75 ಧ್ವಜಗಳನ್ನು ಮಾಡಲಾಯಿತು.

ಕರ್ನಾಟಕ ರಾಜ್ಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ಉತ್ತರಾಧಿಕಾರಿಗಳ ಸಂಘ ಹಾಗೂ ಬ್ಯಾಡಗಿಯ ಮಹಾರಾಜಪೇಟ ಪ್ರತಿಷ್ಠಾನದ ಆಶ್ರಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸ್ವಾತಂತ್ರ್ಯ ಹೋರಾಟಗಾರರು, ನಿವೃತ್ತ ಸೈನಿಕರು ಧ್ವಜಾರೋಹಣ ನೆರವೇರಿಸಿದರು.

—ಪ್ರಕಾಶ ಎಸ್.ಮನ್ನಂಗಿ, ಮೋಟೆಬೆನ್ನೂರು



## ಪಾಚಿ ಬೆಳೆಯದ ಪ್ರಾಚೀನ ಗದ್ದುಗೆ

ಚಿತ್ರದಲ್ಲಿರುವುದು ಅದ್ಭುತ ಶಿಲ್ಪ ಕಲೆಯಿರುವ ದೇವಸ್ಥಾನವಲ್ಲ , ಇದೊಂದು ಗದ್ದುಗೆ. ಗದುಗಿನ ತೋಂಟದಾರ್ಯ ಮಠದ ಎಂಟನೇ ಸ್ವಾಮಿಗಳಾದ ಶ್ರೀ ಕೌದಿ ಮಹಾಂತೇಶ್ವರರು ಜೀವಂತ ಸಮಾಧಿಯಾದ ಸ್ಥಳವಿದು ಎಂಬ ಪ್ರತೀತಿ ಇದೆ. ತುಂಗಭದ್ರಾ ಆಣೆಕಟ್ಟು ಕಟ್ಟಿದ ತರುವಾಯ ಅದರ ಹಿನ್ನೀರಿನಲ್ಲಿ ಅನೇಕ ದಶಕಗಳಿಂದ ಇದು ಮುಳುಗಡೆಯಾಗುತ್ತಲೇ ಇದೆ. ಈಗಲೂ ಇದನ್ನು ತೋಂಟದಾರ್ಯ ಮಠ ಎಂದು ಕರೆಯಲಾಗುತ್ತದೆ.

ಅಚ್ಚರಿ ಮೂಡಿಸುವ ಸಂಗತಿ ಎಂದರೆ ಈ ಗದ್ದುಗೆಯ ವರ್ಷದ ಸುಮಾರು ಆರೇಳು ತಿಂಗಳುಗಳ ಕಾಲ (ಜುಲೈ–ಜನವರಿ) ತುಂಗಭದ್ರಾ ನದಿಯ ಹಿನ್ನೀರಿನಲ್ಲಿ ಮುಳುಗಿರುತ್ತದೆ. ಉಳಿದ ದಿನಗಳಲ್ಲಿ ಬಿಸಿಲಿಗೆ ಮೈಯೊಡ್ಡಿರುತ್ತದೆ. ಆರೇಳು ತಿಂಗಳು ನೀರಿನಲ್ಲಿ ಮುಳುಗಿದ್ದರೂ ಸಹ ನೀರು ಇಳಿದಾಗ ಗದ್ದುಗೆಯ ಗೋಡೆಗಳ ಮೇಲಾಗಲೀ ಸಂದುಗಳಲ್ಲಾಗಲೀ ಇಂಚಿನಷ್ಟೂ ಪಾಚಿ ಜೊಂಡು ಬೆಳೆದಿರುವುದಿಲ್ಲ. ಇದಕ್ಕೆ ವೈಜ್ಞಾನಿಕ ಕಾರಣ ಏನೆಂದು ಗೊತ್ತಿಲ್ಲ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ಯಾಣದ ಪ್ರತಿಬಿಂಬ

ಉತ್ತರ ಕನ್ನಡ ಜಿಲ್ಲೆ ಪ್ರಕೃತಿ ಸಂಪತ್ತಿನ ಗಣಿ. ಶಿರಸಿಯಿಂದ ಹುಬ್ಬಳ್ಳಿ ಮಾರ್ಗದಲ್ಲಿ 2 ಕಿ.ಮೀ. ದೂರದಲ್ಲಿರುವ ಅರಣ್ಯ ಇಲಾಖೆಯ ಸಹಯೋಗದಿಂದ ನಿರ್ಮಿಸಿರುವ ಶಾಲ್ಮಲಾ ಶಿಲಾವನದ ಒಳಹೊಕ್ಕರೆ ದಟ್ಟಾರಣ್ಯವನ್ನು ಪ್ರವೇಶಿಸಿದಂತೆ ಭಾಸವಾಗುತ್ತದೆ. ಯಾಣದ ತದ್ರೂಪಿಯಂತೆ ರಚಿತವಾದ ಪ್ರವೇಶದ್ವಾರ ನಿಮ್ಮನ್ನು ಸ್ವಾಗತಿಸುತ್ತದೆ. ವನ್ಯ ಮೃಗಗಳು, ಉತ್ತರ ಕನ್ನಡದ ಬುಡಕಟ್ಟು ಜನಾಂಗಗಳ ದೈನಂದಿನ ಬದುಕಿನ ದರ್ಶನವೂ ಸಂಪೂರ್ಣ ಕಲ್ಲು ಮತ್ತು ಸಿಮೆಂಟಿನಲ್ಲಿ ಅರಳಿವೆ. ಮಕ್ಕಳ ವಿವಿಧ ಆಟೋಟಗಳ ಸಾಧನಗಳೂ ಮನರಂಜನೆ ನೀಡುತ್ತವೆ.

ಈಚೆಗೆ ನಿಧನರಾದ ಕರ್ನಾಟಕ ಬಯಲಾಟ ಅಕಾಡೆಮಿ ಮಾಜಿ ಅಧ್ಯಕ್ಷ ಟಿ.ಬಿ. ಸೊಲಬಕ್ಕನವರ್ ನೇತೃತ್ವದಲ್ಲಿ 40 ಮಂದಿ ಕಲಾವಿದರ ಪರಿಶ್ರಮದಿಂದ ರೂಪುಗೊಂಡ ಈ ಶಿಲಾವನವು ಉತ್ತರಕನ್ನಡ ಜಿಲ್ಲೆಯ ಹಿರಿಮೆಗೆ ಮತ್ತೊಂದು ಗರಿ ಮೂಡಿಸಿದೆ.

—ಕೆ. ರಾಮಕೃಷ್ಣ ಸೀಬಿನಕೆರೆ





